ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ಸಚಿವರು) : ಆಗಬಹುದು

ಆಲಮಟ್ಟಿಯಲ್ಲಿ ಕೆಲಸ ಮಾಡುವ ಇಂಜನಿಯರ್‌ಗಳ ಬಗ್ಗೆ

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಅಧ್ಯಕ್ಷರೆ, ಆಲಮಟ್ಟಿಯಲ್ಲಿ ಜಾಗವೆಲ್ಲಾ ಮುಳುಗಡೆಯಾಗಿದ್ದು, ಈಗಾಗಲೇ ಪುನರ್ ವಸತಿ ಕಾರ್ಯಗಳು ನಡೆಯುತ್ತಿವೆ. ಅಲ್ಲಿರತಕ್ಕಂಥ ಇಂಜಿನಿಯರ್‌ಗಳಿಗೆ ಅಲ್ಲೇ ಕೆಲಸ ಕೊಡುತ್ತೇವೆ ಎಂಬ ಆಶ್ವಾಸನೆಯನ್ನು ಸರಕಾರದವರು ಕೊಟ್ಟಿದ್ದರು. ಆದರೆ ಈಗ ಬಂದಿರತಕ್ಕಂಥ ಸುದ್ದಿ ಪ್ರಕಾರವಾಗಿ 49 ಜನರಲ್ಲಿ ನಾಲ್ಕು ಜನರನ್ನು ಬಿಟ್ಟು ಉಳಿದೆಲ್ಲಾ ಮಂಡ್ಯದವರನ್ನೇ ನೇಮಕ ಮಾಡಿಕೊಂಡಿದ್ದಾರೆ. ಈಗ ಅಲ್ಲಿರುವಂಥ ಇಂಜಿನಿಯರ್‌ಗಳು ಹೋರಾಟ ಮಾಡುತ್ತಿದ್ದು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಕೇವಲ ನಾಲ್ಕು ಜನಕ್ಕೆ ಬಿಟ್ಟು ಉಳಿದೆಲ್ಲವನ್ನೂ ಮಂಡ್ಯದವರಿಗೆ ಕೊಟ್ಟರೆ ಆಲಮಟ್ಟಿಯಲ್ಲಿರುವಂಥ ಜನಗಳು ಏನು ಮಾಡಬೇಕು? ನನಗೆ ಮಂಡ್ಯನೇ ಆಲಮಟ್ಟಿಯೋ ಮಂಡ್ಯಾನೇ ಇಂಡಿಯಾನೋ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಕೇವಲ ನಾಲ್ಕು ಜನರನ್ನು ಯಾವ ಕಾರಣಕ್ಕಾಗಿ ಬಿಡಲಾಗಿದೆ ಎಂಬ ಬಗ್ಗೆ ವಿವರಗಳಿಲ್ಲ. 440 ಜನರನ್ನು ಹಿಂದೆ ಪ್ರಾದೇಶಿಕ ಅಸಮಾನತೆ ಇತ್ತು ಎಂಬ ಕಾರಣಕ್ಕಾಗಿ ರಿಕ್ರೂಟ್‌ಮೆಂಟ್ ಮಾಡಿದ್ದರು. ರಿಕ್ರೂಟ್‌ಮೆಂಟ್ ಮಾಡಿರತಕ್ಕಂಥ ಸಿಂಧುತ್ವವನ್ನು ಕೆ.ಎ.ಟಿ.ಯಲ್ಲಿ ಪ್ರಶ್ನೆ ಮಾಡಿದ್ದರು. ಕೆ.ಎ.ಟಿ.ಯಲ್ಲಿ ಪ್ರಶ್ನೆ ಮಾಡಿರತಕ್ಕಂಥದ್ದು ಸರಿಯಾದುದಲ್ಲ ಎಂದು ಹೇಳಿದಮೇಲೆ ಮತ್ತೆ ಅವರನ್ನು ಸೇರಿಸಿಕೊಳ್ಳಬೇಕೆಂದು ನಿರ್ಣಯ ಮಾಡಿ ಅವರನ್ನೆಲ್ಲಾ ಸೇರಿಸಿಕೊಂಡಿದ್ದೇವೆ. ಉಳಿದವರು ಇಲ್ಲ ಎಂದು ಹೇಳಿ ಮನವಿಯನ್ನು ಎಲ್ಲರಿಗೂ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಇದನ್ನು ತಂದು ಸರ್ಕಾರ ಖಂಡಿತವಾಗಿಯೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತದೆ.

ಹೊಸ ಪಡಿತರ ಚೀಟಿಗಳ ವಿತರಣೆ

ಶ್ರೀ ಕುಂಬೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೊಸ ಪಡಿತರ ಚೀಟಿಯ ಅಧ್ಯಯನ ನಡೆಯುತ್ತಿದೆ, ಸಂತೋಷ. ಆದರೆ ಅದರಿಂದ ಜನರಿಗೆ ಆಗುತ್ತಿರುವಂಥ ತೊಂದರೆಯನ್ನು ಸರ್ಕಾರ ಗಮನಿಸಿಲ್ಲ. ನಮ್ಮ ಜಿಲ್ಲೆಯಲ್ಲಿ ಏನಾಗಿದೆಯೆಂದರೆ 4ನೇ ತಾರೀಖಿನೊಳಗೆ ಹೊಸ ಪಡಿತರ ಚೀಟಿಯನ್ನು ತೆಗೆದುಕೊಳ್ಳಬೇಕು. ಒಂದುವೇಳೆ ತೆಗೆದುಕೊಳ್ಳದೆ ಇದ್ದಂತಹವರಿಗೆ ಪಡಿತರವನ್ನು ಕೊಡುವಂಥ ವ್ಯವಸ್ಥೆ ಇಲ್ಲ ಎಂಬ ಮಾತು ಬಂದಿದೆ. ಈ ಆದೇಶದಿಂದ ರಜೆಯಲ್ಲಿ ಮತ್ತು ಊರಿಗೆ ಹೋದವರು. ಕೂಲಿ ಕಾರ್ಮಿಕರು ಕಾರ್ಡು ಮಾಡಿಸುವುದಕ್ಕೆ ಅವಕಾಶ ಸಿಗದೆ ಬಹಳ ತೊಂದರೆಗೆ ಒಳಗಾಗುತ್ತಿದ್ದಾರೆ. ಆದುದರಿಂದ ಸರ್ಕಾರದಲ್ಲಿ ನನ್ನ ವಿನಂತಿ ಏನೆಂದರೆ ಕಡಿಮೆ ಪಕ್ಷ ನೀವೇನು ಗುರುತಿನ ಚೀಟಿಯನ್ನು ಕೊಡುತ್ತೀರಿ, ಅದೇ ಚೀಟಿಯಲ್ಲಿ ಎರಡು ತಿಂಗಳವರೆಗೆ ಅವರಿಗೆ